ನೌಕರರ ವಿವರ ಕೊಟ್ಟಿದ್ದೀರೇ ಹೊರತು ದೊಡ್ಡವರು ಯಾರೂ ಕಾಣುತ್ತಾ ಇಲ್ಲ. ಅವರ ವರದಿ ತರಿಸುವುದಕ್ಕೆ ಏರ್ಪಾಟು ಮಾಡುತ್ತೀರಾ, ಇಲ್ಲದಿದ್ದರೆ ಈ ಅಭ್ಯಾಸವನ್ನು ಕಂಪ್ಲೀಟಾಗಿ ತೆಗೆಯುತ್ತೀರಾ?

ಶ್ರೀ ರಾಮಕೃಷ್ಣ ಹೆಗಡೆ.— ಈ ರಹಸ್ಯ ವರದಿ ಎಷ್ಟರ ಮಟ್ಟಿಗೆ ವಸ್ತು ನಿಷ್ಠವಾಗಿರಬಹುದು ಎನ್ನುವುದರ ಬಗ್ಗೆ ಮತಭೇದ ಇರಬಹುದು. ಆದರೆ ಈ ಪದ್ಧತಿಯನ್ನು ತೆಗೆದುಹಾಕತಕ್ಕಂಥಾದ್ದು ಸರಿಯಲ್ಲ ಎಂದು ನನ್ನ ಭಾವನೆ. ತಮಿಳುನಾಡಿನಲ್ಲಿ ರದ್ದು ಮಾಡಿರಬಹುದು. ಇದು ಬಹಳ ವರ್ಷಗಳಿಂದಲೂ ಅಂದರೆ ಈ ಸರ್ಕಾರದ ಆಡಳಿತ ಪ್ರಾರಂಭವಾದಂದಿನಿಂದಲೂ ಈ ಪದ್ಧತಿ ನಡೆದುಕೊಂಡು ಬಂದಿದೆ. ಇದನ್ನು ತೆಗೆದುಹಾಕಿದರೆ ನಾವು ಯಾವ ಸರ್ಕಾರಿ ನೌಕರ ಯಾವ ರೀತಿ ಕೆಲಸ ಮಾಡಿದ್ದಾನೆ, ಅವನ ಸಾಮರ್ಥ್ಯ ಏನು, ಅವನ ಯೋಗ್ಯತೆ ಏನು ಮತ್ತು ಅವನು ಪ್ರಾಮಾಣಿಕನೋ ಅಥವಾ ಅಪ್ರಾಮಾಣಿಕನೋ, ವಸ್ತುನಿಷ್ಠನಾಗಿರುತ್ತಾನೋ ಇಲ್ಲವೋ ಎಂಬುದನ್ನು ತಿಳಿದುಕೊಳ್ಳತಕ್ಕ ಬಗೆ ಹೇಗೆ? ಇದನ್ನು ತಿಳಿದುಕೊಳ್ಳುವವರು ಅವನ ಮೇಲೆ ಇರತಕ್ಕಂಥ ಅಧಿಕಾರಿ, ಯಾರ ಕೆಳಗಡೆ ಕೆಲಸ ಮಾಡಿರುತ್ತಾನೋ ಅವರು ತಿಳಿದುಕೊಳ್ಳುತ್ತಾರೆ. ಇದು ನೂರಕ್ಕೆ ನೂರರಷ್ಟು ವಸ್ತು ನಿಷ್ಠವಾಗಿರುತ್ತದೆ ಅಥವಾ ಅವರ ಮನಸ್ಸಿನಲ್ಲಿ ಪ್ರಜುಡೀಸ್ ಆಗಲಿ ಪ್ರೆಜಿಲಿಕ್ಷನ್ ಆಗಲಿ ಇಲ್ಲವೇ ಇಲ್ಲ ಎಂದು ಹೇಳಲಿಕ್ಕೆ ನಾನು ಸಿದ್ಧನಿಲ್ಲ. ಆದರೆ ಇರಬಹುದು ಅವರಿಗೆ ಒಬ್ಬರ ಮೇಲೆ ಹೆಚ್ಚು ಪ್ರೀತಿ ಇರಬಹುದು, ಇನ್ನೊಬ್ಬರ ಮೇಲೆ ಕಡಿಮೆ ಪ್ರೀತಿ ಇರಬಹುದು. ಆದರೆ ಈ ಪದ್ಧತಿಯನ್ನು ಅನುಸರಿಸಬೇಕಾಗುತ್ತದೆ. ಸಾಮಾನ್ಯವಾಗಿ ವರದಿ ವಸ್ತು ನಿಷ್ಠವಾಗಿರಬೇಕು ಎಂದು ಹೇಳುತ್ತೇನೆ. ಇನ್ನು ಎರಡನೆಯದು ಅಂದರೆ, ಎಲ್ಲರೂ ಚಿಕ್ಕಚಿಕ್ಕ ಸಣ್ಣ ಪುಟ್ಟ ನೌಕರರು ಎಂದು ಹೇಳುವುದು ಸರಿಯಲ್ಲ. ಎ ಗ್ರೂಪ್ ಬಿ ಗ್ರೂಪ್ ನವರು ಇದ್ದಾರೆ. ಡಿ ಗ್ರೂಪ್‌ನವರು ಕಡಿಮೆ ಇದ್ದಾರೆ ಅಷ್ಟು ದೊಡ್ಡ ಸಂಖ್ಯೆಯಲ್ಲಿ ಇಲ್ಲ.

ವಿಶ್ವ ಬ್ಯಾಂಕ್‌ನಿಂದ ಪಡೆಯುವ ಸಾಲ, ಕ್ರಮ ಬಗ್ಗೆ.

ಪ್ರಶ್ನೆ. ಶ್ರೀ ಎನ್. ಎಸ್. ಕಡಪಟ್ಟಿ.— ಮಾನ್ಯ ಮಂಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೇಂದ್ರಸರ್ಕಾರ ಹಾಗೂ ರಾಜ್ಯಗಳು ತಮ್ಮ ರಾಜ್ಯಗಳಲ್ಲಿಯ ಯೋಜನೆಗಳಿಗೆ ವಿಶ್ವ ಬ್ಯಾಂಕ್‌ನಿಂದ ಪಡೆಯುವ ಸಾಲದ ಹಣದಲ್ಲಿ ತಾನು ಇಟ್ಟುಕೊಳ್ಳುವ ಹಣದ ಪ್ರಮಾಣ ಎಷ್ಟು?

ಆ) ವಿಶ್ವ ಬ್ಯಾಂಕ್ ಅಂತಹ ಸಾಲಗಳ ಮೇಲೆ ಹಾಕುವ ಬಡ್ಡಿ ಹಾಗೂ ಕೇಂದ್ರ ಸರ್ಕಾರ ರಾಜ್ಯಗಳಿಗೆ ಹಾಕುವ ಬಡ್ಡಿಯಲ್ಲಿ ವ್ಯತ್ಯಾಸ ಇದ್ದರೆ ಅದು ಎಷ್ಟು, ಹಾಗೂ ಈಗ ಚಾಲ್ತಿ ಸಾಲಗಳಿಗೆ ಕೊಡುತ್ತಿರುವ ಬಡ್ಡಿ ವಿವರ ಒದಗಿಸುವುದೆ.

ಇ) ಬ್ಯಾಂಕ್ ರಾಜ್ಯದ ಯೋಜನೆಗಳಿಗೆ ಯೋಜನೆಯ ಶೇಕಡಾ ಎಷ್ಟು ಪ್ರಮಾಣದ ಹಣ ಕೊಡುವರು (ವಿವರ ಒದಗಿಸುವುದು),

ಈ) ವಿಶ್ವ ಬ್ಯಾಂಕ್ ಆಯಾ ಯೋಜನೆಗಳ ಪೂರ್ತಿ ಮೊತ್ತ ಕೊಡದಿದ್ದರೆ ಹಾಗೂ ಅದರಲ್ಲಿಯೇ ಕೇಂದ್ರ ಸರ್ಕಾರ ಕೆಲವು ಪ್ರಮಾಣ ತನ್ನಲ್ಲಿಟ್ಟುಕೊಂಡಲ್ಲಿ ದಂಸ್ಥಿತಿಯಲ್ಲಿದ್ದ ರಾಜ್ಯಗಳ ಹಣಕಾಸಿನಲ್ಲಿ ಯೋಜನೆಗಳ ತ್ವರಿತ ಕಾರ್ಯಾಚರಣೆ ಕುಂಠಿತವಾಗುವುದಿಲ್ಲವೇ ಹಾಗೂ ಬಡ್ಡಿಯ ವ್ಯತ್ಯಾಸವಿದ್ದಲ್ಲಿ ಅದು ರಾಜ್ಯಗಳಿಗೆ ಭಾರವಾಗುವುದಿಲ್ಲವೇ?

ಉ) ಈ ಬಗ್ಗೆ ಕೇಂದ್ರ ಸರ್ಕಾರದ ಗಮನ ಸೆಳೆಯಲು ಸರ್ಕಾರದವರು ತೆಗೆದುಕೊಂಡ ಕ್ರಮ ಏನು ವಿವರವಾಗಿ ತಿಳಿಸುವುದು?

ಶ್ರೀ ರಾಮಕೃಷ್ಣ ಹೆಗಡೆ (ಮಂಖ್ಯ ಮಂತ್ರಿಗಳು).—

ಅ) ವಿಶ್ವ ಬ್ಯಾಂಕ್‌ನ ಸಾಲಗಳು ಅಭಿವೃದ್ಧಿ ಚಟುವಟಿಕೆಗಳಿಗಾಗಿ ಭಾರತ ಸರ್ಕಾರಕ್ಕೆ ಕೊಡಲಾಗುತ್ತದೆ. ಈ ರೀತಿ ಬಂದ ಹಣದ ಶೇಕಡಾ ೭೦ರಷ್ಟು ಭಾಗವನ್ನು ರಾಜ್ಯಗಳಿಗೆ ವಹಿಸಿಕೊಡಲಾಗುವುದು.

ಆ) ಭಾರತ ಸರ್ಕಾರಕ್ಕೆ ವಿಶ್ವ ಬ್ಯಾಂಕಿನಿಂದ ಸಿಕ್ಕುವ ಸಾಲದ ದರವು ಲಭ್ಯವಿರುವ ಮೂಲಗಳನ್ನು ಮತ್ತು ಯೋಜನೆಗಳನ್ನು ಅವಲಂಬಿಸಿ ವ್ಯತ್ಯಾಸವಾಗುತ್ತದೆ. ಇದು ಸಾಮಾನ್ಯವಾಗಿ ಶೇಕಡಾ

ಳಿಕ್ಕಿಂತ ಕಡಿಮೆ ಇರುತ್ತದೆ. ಆದರೆ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಹಾಕುವ ಬಡ್ಡಿ ದರ ರಾಜ್ಯ ಯೋಜನೆಗಳಿಗೆ ಅನ್ವಯಿಸುವ ಬಡ್ಡಿ ದರದಷ್ಟೆ ಆಗಿದೆ. ಈಗ ಅದು ಸಾಲಿಯಾನ ಶೇಕಡಾ ೮¾ ಆಗಿದೆ.

೫) ವಾರ್ಷಿಕ ರಾಜ್ಯ ಯೋಜನೆಗಳ ಅನುಮೋದಿತ ವೆಚ್ಚ	ವಿಶ್ವ ಬ್ಯಾಂಕಿನಿಂದ ಪಡೆದ ಸಹಾಯ ಧನ (ಸಾಲ ಮತ್ತು ಅನುದಾನ)
೧೯೮೫-೮೬ ರೂ. ೬೫೧.೦೦ ಕೋಟಿ	ರೂ. ೩೬.೧೩ ಕೋಟಿ
೧೯೮೬-೮೭ ರೂ. ೭೬೫.೦೦ ಕೋಟಿ	ರೂ. ೨೯. ೮೯ ಕೋಟಿ

ಈ ಮತ್ತು ಉ) ಈ ವಿಚಾರದಲ್ಲಿ ರಾಜ್ಯ ಸರ್ಕಾರ ಅನೇಕ ಸಲ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ. ಪುನಃ ನೀವೇ ಪ್ರಣಾಳಿಕೆಯ ಆಯೋಗದ ಮುಂದೆ ನಮ್ಮ ವಾದವನ್ನು ಇಡಲಾಗುವುದು.

ಶ್ರೀ ಎನ್. ಎಸ್. ಕಡಪಟ್ಟಿ.— ಸ್ವಾಮಿ ಈ ಯೋಜನೆಗಳಿಗೆ ಜಾಗತಿಕ ಬ್ಯಾಂಕ್ ಕೊಡತಕ್ಕ ಹಣ ನೋಡಿದರೆ ಒಟ್ಟು ಶೇಕಡಾ ೫೦ರಿಂದ ೭೦ರಷ್ಟು ಹಣ ಕೊಡಬಹುದು. ಆದರಲ್ಲಿ ಕೇಂದ್ರದವರು ೫೦ ಪರ್ಸೆಂಟ್ ಹಣ ಕೊಟ್ಟು ೩೦ ಪರ್ಸೆಂಟ್ ಇಟ್ಟುಕೊಂಡರೆ ನೂರಕ್ಕೆ ೩೫ರಷ್ಟು ಮಾತ್ರ ಸಿಕ್ಕುತ್ತದೆ. ಇದನ್ನು ಲೆಕ ಹಾಕಿದರೆ ನೂರಕ್ಕೆ ೬೫ರಷ್ಟು ರಾಜ್ಯಸರ್ಕಾರ ಖರ್ಚು ಮಾಡಲಿಕ್ಕೆ ತೊಂದರೆಯಾಗುತ್ತದೆ. ಆ ದೃಷ್ಟಿಯಿಂದ, ಈಗ ಜಾಗತಿಕ ಬ್ಯಾಂಕಿನಿಂದ ಬರತಕ್ಕ ಸಂಪೂರ್ಣ ಹಣವನ್ನು ಪಾಸ್ ಆನ್ ಮಾಡಲಿಕ್ಕೆ, ಜಾಗತಿಕ ಬ್ಯಾಂಕ್ ಆಕರ್ಷಣೆ ಮಾಡಿ ಬಡ್ಡಿಯನ್ನು ಆಕರಣೆ ಮಾಡಲಿಕ್ಕೆ ಎನ್.ಡಿ.ಸಿ.ಯಲ್ಲಿ ಮತ್ತು ಮುಖ್ಯ ಮಂತ್ರಿಗಳ ಕಾನ್‌ಫರನ್ಸ್‌ನಲ್ಲಿ ಇನ್ನಿತರ ವೇದಿಕೆಗಳ ಮೇಲೆ ಎಲ್ಲಾ ರಾಜ್ಯಗಳ ಮುಖ್ಯ ಮಂತ್ರಿಗಳು ಕೇಂದ್ರ ಸರ್ಕಾರದ ಮೇಲೆ ಏನು ಒತ್ತಡ ತೆಗೆದುಕೊಂಡು ಬಂದಿದ್ದೀರಿ? ತಾವು ಏನು ಮಾಡಿದ್ದೀರಿ ಎನ್ನುವುದನ್ನು ನಿರ್ದಿಷ್ಟವಾಗಿ ತಿಳಿಸಬೇಕು. ಈಗ ವಾರ್ಷಿಕ ಅಂದಾಜು ಮಾತ್ರ ಹೇಳಿದ್ದೀರಿ. ಇದರ ಜೊತೆಗೆ ಯಾವ ಯಾವ ಪ್ರಾಜೆಕ್ಟ್‌ಗಳಿಗೆ ಎಷ್ಟೆಷ್ಟು ಹಣ ಬಂದಿದೆ. ಎಷ್ಟೆಷ್ಟು ಖರ್ಚಾಗಿದೆ ಎನ್ನುವುದನ್ನು ತಿಳಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅಧ್ಯಕ್ಷರೆ, ಈ ಪ್ರಶ್ನೆ ಹಾಕಿರುವುದನ್ನು ನೋಡಿದರೆ ಮಾನ್ಯ ಮುಖ್ಯ ಮಂತ್ರಿಗಳೇ ಅವರಿಗೆ ಹೇಳಿ ಹಾಕಿಸಿದ್ದಾರೆಂದು ಕಾಣುತ್ತದೆ.

ಅಧ್ಯಕ್ಷರು.— ಮಾನ್ಯ ಸದಸ್ಯರಾದ ಕಡಪಟ್ಟಿಯವರು ಏನೂ ಕಡಿಮೆ ಇಲ್ಲ.

ಶ್ರೀ ರಾಮಕೃಷ್ಣ ಹೆಗಡೆ.— ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಖರ್ಗೆಯವರು ಏನು ಒಂದು ಪ್ರತಿಕ್ರಿಯೆ ವ್ಯಕ್ತ ಮಾಡಿದರು, ಅದಕ್ಕೆ ಒಂದು ಸಣ್ಣ ತಿದ್ದುಪಡಿ ಹೇಳಲಿಕ್ಕೆ ಬಯಸುತ್ತೇನೆ. ಏನೆಂದರೆ ಈ ಪ್ರಶ್ನೆಯನ್ನು ಅವರು ತಮ್ಮ ಸ್ವಂತ ಬುದ್ಧಿಯಿಂದ ಕೇಳಿದ್ದರೂ ಅವರು ನನ್ನ ಮಾನಸಿಕ ವಿಚಾರವನ್ನು ಕೇಳಿದ್ದಾರೆ. ಈಗ ಯಾವ ಯಾವ ಯೋಜನೆಗಳಿಗೆ ಎಷ್ಟು ಹಣ ಕೊಟ್ಟಿದ್ದಾರೆಂದು ಮೊದಲು ಹೇಳುತ್ತೇನೆ. ಕರ್ನಾಟಕ ಡೈರಿ ಡೆವಲಪ್‌ಮೆಂಟ್ ೧೯೮೫-೮೬ ೪೧ ಲಕ್ಷ ರೂಪಾಯಿ. ಕರ್ನಾಟಕ ಸಿರಿ ಕಲ್ಚರ್ ೩ ಕೋಟಿ ೪೧ ಲಕ್ಷ ರೂಪಾಯಿ. ೧೯೮೬-೮೭ ೭ ಕೋಟಿ ೨೪ ಲಕ್ಷ ರೂಪಾಯಿ ಟ್ಯಾಂಕ್ ಇರಿಗೇಷನ್ ೧೯೮೫-೮೬ ೯ ಕೋಟಿ ೬೫ ಲಕ್ಷ ರೂಪಾಯಿ, ೧೯೮೬-೮೭ ೧೦ ಕೋಟಿ ೪ ಲಕ್ಷ ರೂಪಾಯಿಗಳು.

ಕರ್ನಾಟಕ ಇರಿಗೇಷನ್‌ಗೆ ೧೯೮೫-೮೬ರಲ್ಲಿ ೧೫ ಕೋಟಿ ೮೩ ಲಕ್ಷ ರೂಪಾಯಿಗಳು. ೧೯೮೬-೮೭ರಲ್ಲಿ ೬ ಕೋಟಿ ೨೭ ಲಕ್ಷ ರೂಪಾಯಿಗಳು. ಕರ್ನಾಟಕ ಸೋಷಿಯಲ್ ಫಾರೆಸ್ಟ್ರಿಗೆ ೧೯೮೫-೮೬ರಲ್ಲಿ ೪ ಕೋಟಿ ೩೭ ಲಕ್ಷ ರೂಪಾಯಿಂಗಳು ೧೯೮೬-೮೭ರಲ್ಲಿ ೪ ಕೋಟಿ ೭ ಲಕ್ಷ ರೂಪಾಯಿಗಳು. ಆಮೇಲೆ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮವಾದ ರೈನ್‌ಫೆಡ್ ಏರಿಯಾ ವಾಟರ್ ಷೆಡ್ ಡೆವಲಪ್‌ಮೆಂಟ್‌ಗೆ ೧೯೮೫-೮೬ರಲ್ಲಿ ೧೦ ಲಕ್ಷ, ೧೯೮೬-೮೭ರಲ್ಲಿ ೪೪ ಲಕ್ಷ ರೂಪಾಯಿಗಳು ಟ್ರೈಬಲ್ಸ್‌ಗಾಗಿ ೧೯೮೫-೮೬ರಲ್ಲಿ ೭ ಲಕ್ಷ ರೂಪಾಯಿ, ಮರುವರ್ಷ ೯ ಲಕ್ಷ ರೂಪಾಯಿಗಳು. ನ್ಯಾಷನಲ್ ಅಗ್ರಿಕಲ್ಚರ್ ಎಕ್ಸ್‌ಟೆನ್‌ಷನ್ ಕಾರ್ಯಕ್ರಮಕ್ಕೆ ೧೯೮೫-೮೬ರಲ್ಲಿ ೨ ಕೋಟಿ ೩೦ ಲಕ್ಷ ರೂಪಾಯಿಗಳು, ಮರುವರ್ಷಕ್ಕೆ ಎರಡು ಕೋಟಿ ೭೯ ಲಕ್ಷ ರೂಪಾಯಿಗಳು. ಒಟ್ಟು ೧೯೮೫-೮೬ರಲ್ಲಿ ೩೪ ಕೋಟಿ ೧೩ ಲಕ್ಷ ರೂಪಾಯಿಗಳು. ಮರುವರ್ಷ ೨೯ ಕೋಟಿ ೭೯ ಲಕ್ಷ ರೂಪಾಯಿಗಳು. ಮತ್ತೆ ಮಾನ್ಯ ಸದಸ್ಯರು ಯಾವಯಾವ ಸಂದರ್ಭದಲ್ಲಿ ಯಾರಯಾರ ಮುಂದೆ ಈಗಿರತಕ್ಕ ಪ್ರೊಸೀಜರ್ ಬದಲಾಯಿಸಬೇಕೆಂದು ಕೇಳಿದ್ದೀರಿ ಎಂದು ಕೇಳಿದ್ದಾರೆ. ನನಗೆ ಅವಕಾಶ ಸಿಕ್ಕಾಗಲೆಲ್ಲಾ ಇದರ ಬಗ್ಗೆ ಪ್ರತಿಪಾದನೆ

ಮಾಡಿದ್ದೇನೆ. ಬಹಳ ಪ್ರಬಲವಾಗಿ ಪ್ರತಿಪಾದಿಸಿದ್ದೇನೆ. ಇದರಲ್ಲಿ ಅನ್ಯಾಯವಾಗುತ್ತಿದೆ. ಎಂದು ಹೇಳಿದ್ದೇನೆ. ನಮ್ಮದು ಮಾತ್ರವಲ್ಲ ಎಲ್ಲ ರಾಜ್ಯ ಸರ್ಕಾರಗಳ ಅಭಿಪ್ರಾಯವೂ ಇದೇ ಆಗಿದೆ. ಆದರೂ ಇವತ್ತಿನವರೆಗೂ ಕೇಂದ್ರ ಸರ್ಕಾರದ ಮನಸ್ಸನ್ನು ಒಲಿಸಿಕೊಳ್ಳುವುದಕ್ಕೆ ನಮಗೆ ಸಾಧ್ಯವಾಗಲಿಲ್ಲ. ಏನೇ ಆರ್ಥಿಕ ಆಯೋಗದ ಮುಂದೆ ಮಾನ್ಯ ಸದಸ್ಯರು ಯಾರೇ ಆಗಲಿ ನಮ್ಮ ವಾದ ಏನು ಮಾಡಿದ್ದೇವೆ ಎಂಬುದನ್ನು ನೋಡಿದರೆ ಗೊತ್ತಾಗುತ್ತದೆ. ನಾವು ಸ್ಪಷ್ಟವಾಗಿ ಹೇಳಿದ್ದೇವೆ. ಪ್ರತಿಸಲ ರಾಷ್ಟ್ರೀಯ ಅಭಿವೃದ್ಧಿ ಮಂಡಲಿಯಲ್ಲಿ ಈ ವಿಚಾರವನ್ನು ನಾನು ವಾದ ಮಾಡಿ ನೀವು ಮಾರ್ವಾಡಿ ಮನೋವೃತ್ತಿ ತೋರಿಸಬೇಡಿ ಎಂದು ಹೇಳಿದ್ದೇವೆ. ವಿಶ್ವಬ್ಯಾಂಕ್ ಇರಲಿ ಬೇರೆ ಸರ್ಕಾರ ಇರಲಿ ಅವರು ಕೊಡತಕ್ಕ ಸಾಲದಲ್ಲಿ ಪೂರಾ ನಮಗೆ ಕೊಡುವುದಿಲ್ಲ. ಸಾಲದ ಮೇಲಿನ ಬಡ್ಡಿ ಶೇಕಡ ೪ ಅಥವಾ ೨ರಷ್ಟು ಅವರು ಚಾರ್ಜ್ ಮಾಡಿದರೂ ಕೇಂದ್ರ ಸರ್ಕಾರ ನಮಗೆ ಮಾಡತಕ್ಕದ್ದು ಮೊದಲು ೫ರೂಪರೆ ಪರ್ಸೆಂಟ್ ಇತ್ತು, ಈಗ ೮½/೪ ಪರ್ಸೆಂಟ್ ಮಾಡುತ್ತಾರೆ. ಇದು ಅನ್ಯಾಯ, ರಾಜ್ಯ ಸರ್ಕಾರದ ಹತ್ತಿರ ಸಾಕಷ್ಟು ಸಂಪನ್ಮೂಲ ಇಲ್ಲ, ಈ ಸಂಪನ್ಮೂಲಗಳಲ್ಲೂ ಕಡಿತ ಮಾಡುತ್ತೀರಿ, ಸಾಲದ ಹೊರೆ ಅಸಾಧ್ಯವಾಗಿದೆ, ಈಗ ಮತ್ತಷ್ಟು ಬಡ್ಡಿದರವನ್ನು ಹೆಚ್ಚು ಮಾಡುತ್ತೀರಿ, ಇದನ್ನು ತಪ್ಪಿಸಬೇಕು ಎಂದು ಬಹಳ ಪ್ರಬಲವಾಗಿ ನಾನು ವಾದ ಮಾಡಿದ್ದೇನೆ. ಇದರಲ್ಲಿ ಯಾವುದೇ ತರಹದ ಅನುಮಾನ ಇಲ್ಲ.

ಪರಿಶಿಷ್ಟ ಜಾತಿಯ ಪ್ರತಿಭಾವಂತ ಪದವೀಧರರನ್ನು ನೇರ ನೇಮಕಾತಿ ಮಾಡಿಕೊಳ್ಳುವ ಬಗ್ಗೆ

೬೫೯. ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸರ್ಕಾರದಿಂದ ನೇರವಾಗಿ ನೇಮಕಾತಿ ಮಾಡಲ್ಪಟ್ಟ ಪರಿಶಿಷ್ಟ ಜಾತಿಯ ಪ್ರತಿಭಾವಂತ ಪದವೀಧರರ ಸಂಖ್ಯೆ ಎಷ್ಟು,

ಆ) ಈ ಬಗ್ಗೆ ಉಚ್ಚ ನ್ಯಾಯಾಲಯವು ತಡೆಯಾಜ್ಞೆ ನೀಡಿರುವುದು ನಿಜವೆ,

ಇ) ತಡೆಯಾಜ್ಞೆಯನ್ನು ಇದುವರೆಗೆ ತೆರವು ಮಾಡದಿದ್ದಲ್ಲಿ, ತೆರವು ಮಾಡುವುದಕ್ಕೆ ಆಗಿರುವ ವಿಳಂಬಕ್ಕೆ ಕಾರಣಗಳೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).—

ಅ) ಯಾರನ್ನೂ ನೇಮಕ ಮಾಡಿಲ್ಲ.

ಆ) ಹೌದು

ಇ) ತಡೆಯಾಜ್ಞೆಯನ್ನು ತೆರವು ಮಾಡುವಂತೆ ಕೋರಿ ರಾಜ್ಯ ಸರ್ಕಾರವು ಸಲ್ಲಿಸಿದ್ದ ಅರ್ಜಿಯನ್ನು ಪರಿಶೀಲಿಸಿದ ಉಚ್ಚ ನ್ಯಾಯಾಲಯದ ವಿಭಾಗ ಪೀಠವು, ತಡೆಯಾಜ್ಞೆಯನ್ನು ತೆರವು ಮಾಡಲು ನಿರಾಕರಿಸಿತು.

ಈ ವಿಚಾರದಲ್ಲಿ ಎರಡು ಮೂರು ಸಲ ಮಾನ್ಯ ಸದಸ್ಯರಾದ ಬಸವಲಿಂಗಪ್ಪನವರು ಹಿಂದೆ ಹೇಳಿದ್ದಾರೆ. ತಡೆಯಾಜ್ಞೆಯನ್ನು ತೆರವು ಮಾಡಲು ಏತಕ್ಕೆ ಪ್ರಯತ್ನ ಮಾಡಲಿಲ್ಲ ಎಂದು ಕೇಳಿದ್ದಾರೆ ನಾವು ಎರಡು ವರ್ಷಗಳಿಂದ ಪ್ರಯತ್ನ ಮಾಡುತ್ತಾ ಬಂದಿದ್ದೇವೆ. ಏನೇನು ಪ್ರಯತ್ನ ಮಾಡಿದ್ದೇವೆ ಎಂಬ ಪಟ್ಟಿ ಕೊಟ್ಟಿದ್ದೇನೆ. ಅಡ್ವೊಕೇಟ್ ಜನರಲ್ ಅವರನ್ನೂ ಎರಡು ಮೂರು ಸಲ ಕರೆಸಿ ಹೇಳಿದ್ದೇನೆ. ಏನೇ ಪ್ರಯತ್ನ ಮಾಡಿದರೂ ಕೂಡ ಕೊನೆಗೂ ತಡೆಯಾಜ್ಞೆಯನ್ನು ತೆರವು ಮಾಡಲಿಕ್ಕೆ ನ್ಯಾಯ ಪೀಠ ಒಪ್ಪಲಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಹೇಳಿದ್ದಾರೆ. ಅವರು ತಮ್ಮ ಅಶಕ್ತತೆಯನ್ನು ವ್ಯಕ್ತಪಡಿಸಿದ್ದಾರೆ. ಹೋದಸಾರಿ ಇದೇ ಪ್ರಶ್ನೆಯನ್ನು ಈ ಬಗ್ಗೆ ಕೇಳಿದಾಗ ಉತ್ತರವಾಗಿ ಅವರು ಈ ರೀತಿ ಹೇಳಿದ್ದಾರೆ.

"ಗೊತ್ತುಪಡಿಸಿದ ಕೆಲವು ಪದವಿ, ಸ್ನಾತಕೋತ್ತರ ಪದವಿ ಪರೀಕ್ಷೆಗಳಲ್ಲಿ ಪ್ರಥಮ ಪ್ರಯತ್ನದಲ್ಲಿ ಅತಿ ಹೆಚ್ಚಿನ ಅಂಕಗಳನ್ನು ಗಳಿಸಿದ ಪರಿಶಿಷ್ಟ ಜಾತಿ ಮತ್ತು ಪಂಗಡಗಳ